### ವೈಜ್ಞಾನಿಕ ಅಧ್ಯಯನದಲ್ಲಿ ಪಾಲ್ಗೊಳ್ಳಲು ಜನಸಮುದಾಯಕ್ಕೂ ಅವಕಾಶ

# ಸ್ವಯಂಚಾಲಿತ ಹವಾಮಾನ ಕೇಂದ್ರ ಉದ್ಘಾಟನೆ

■ **ವಿಕ ಸುದ್ದಿಲೋಕ** ದೊಡ್ಡಬಳ್ಳಾಪುರ

''ಅರ್ಕಾವತಿ ನದಿ ಪುನಶ್ಚೇತನಕ್ಕೆ ಪೂರಕವಾಗಿ ಜಲಾನಯನದ ನೀರಿನ ನಿರ್ವಹಣೆ ಕುರಿತಂತೆ ಸಂಶೋಧನೆ ಮಾಡಲಾಗುತ್ತಿದೆ,'' ಎಂದು ಏಟ್ರಿ ಸಂಸ್ಥೆಯ ಶರತ್ಚಂದ್ರ ಲೇಲೆ ತಿಳಿಸಿದರು.

ತಾಲೂಕಿನ ಅರಳು ಮಲ್ಲಿಗೆ ಗ್ರಾ.ಪಂ. ವ್ಯಾಪ್ತಿಯ ಸರ್ವ ಮಾನ್ಯ (ಎಸ್ ಎಂ) ಗೊಲ್ಲಹಳ್ಳಿಯ ಗ್ರಾಮಸ್ಥರ ಸಹಭಾಗಿತ್ವದಲ್ಲಿ ಅಶೋಕ ಟ್ರಸ್ಟ್ ಫಾರ್ ರಿಸರ್ಚ್ ಇನ್ ಇಕಾಲಜಿ ಆ್ಯಂಡ್ ದಿ ಎನ್ವಿರಾನ್ಮೆಂಟ್ ಸಂಸ್ಥೆ ಸ್ಥಾಪಿಸಿದ ಸ್ವಯಂ ಚಾಲಿತ ಹವಾಮಾನ ಕೇಂದ್ರದ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

**ದೊಡ್ಡ ಸುದ್ದಿ**

''ನೀರಿನ ಅಭಾವಕ್ಕೆ ಮಳೆ ಕಡಿಮೆಯಾಗಿರುವುದೇ ಕಾರಣ ಎಂದು ಬಲವಾದ ನಂಬಿಕೆ ಇದ್ದರೂ ಸರಾಸರಿ ವಾರ್ಷಿಕ ಮಳೆಯ ಪ್ರಮಾಣದಲ್ಲಿ ದೊಡ್ಡ ವ್ಯತ್ಯಾಸ ಇಲ್ಲದಿರುವುದರಿಂದ ನೀರಿನ ಬರಕ್ಕೆ ಕಾರಣವಾಗುವ ಅಕಾಲಿಕ ಮಳೆ, ಅಂತರ್ಜಲ ಬಳಕೆ ಮತ್ತು ಹರಿವು, ನೀಲಗಿರಿ ಮತ್ತಿತರ ಬೆಳೆಗಳಿಂದಾಗುವ ಬಾಷ್ಪೀಕರಣ, ಕೆರೆ ಕಟ್ಟೆಗಳಲ್ಲಿ ನೀರಿನ ಹರಿವು, ಇಂಗುವಿಕೆ ಮತ್ತು ಆರುವಿಕೆ ಮುಂತಾದ ಹಲವು ಅಂಶಗಳ ಕುರಿತು ವೈಜ್ಞಾನಿಕ ಅಧ್ಯಯನ ಮಾಡಲಾಗುತ್ತಿದೆ. ಈ ಅಧ್ಯಯನದಲ್ಲಿ ಜನ ಸಮುದಾಯಗಳೂ ಭಾಗ ವಹಿಸಲು ಅವಕಾಶವಿರುವುದು ಸಂಶೋಧನೆಯ ವಿಶೇಷತೆ,'' ಎಂದರು.

ಅರಳು ಮಲ್ಲಿಗೆ ಗ್ರಾ.ಪಂ.ಅಧ್ಯಕ್ಷ ಜಿ. ಎಚ್. ಮಲ್ಲೇಶ್ ಮಾತನಾಡಿ, ''ಈಗ ನೀರಿನ ಸಮಸ್ಯೆ ಸಾರ್ವತ್ರಿಕವಾದುದು. ನೀರಿನ ಅಭಾವದಿಂದಾಗಿ ಜನರಿಗೆ ಕುಡಿಯುವ ನೀರು ಒದಗಿಸಲು ಪಂಚಾಯಿತಿಗಳು ಹರಸಾಹಸ ಪಡುತ್ತಿವೆ. ಅರ್ಕಾವತಿ ಜಲಾನಯನದಲ್ಲಿ ನಡೆಯುವ ಸಂಶೋಧನೆ ಅಥವಾ ನದಿ ಪುನಶ್ಚೇತನದ ಯಾವುದೇ ಚಟುವಟಿಕೆಗಳಾಗಲಿ ಪಂಚಾಯಿತಿಗಳು ಮತ್ತು ಗ್ರಾಮಸ್ಥರು ತಮ್ಮನ್ನು ತಾವು ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು,'' ಎಂದರು.

ಕಾರ್ಯಕ್ರಮದಲ್ಲಿ ಅರ್ಕಾವತಿ ಕುಮುದ್ವತಿ ನದಿ ಪುನಶ್ಚೇತನ ಸಮಿತಿಯ ಕಾರ್ಯದರ್ಶಿ ಎಂ. ಆರ್. ಸೀತಾರಾಂ, ನಾಗದಳದ ಸಿ. ನಟರಾಜ್, ಏಟ್ರೀ ಸಂಸ್ಥೆಯ ಡಾ.ವೀಣಾ ಶ್ರೀನಿವಾಸನ್, ಕೃಪಾಕರ, ಮುಖಂಡರಾದ ಜನಾರ್ದನ ಕೆಸರಗದ್ದೆ, ಮಂಜುನಾಥ್, ಎಸ್. ಎಂ. ಗೊಲ್ಲಹಳ್ಳಿ ಹಾಲು ಉತ್ಪಾದಕರ ಸಂಘದ ಅಧ್ಯಕ್ಷ ಲೋಕೇಶ್, ಕಾರ್ಯದರ್ಶಿ ಕೆಂಪಣ್ಣ, ಗ್ರಾಮಸ್ಥರಾದ ಅಶ್ವತ್ಥನಾರಾಯಣ, ನಾಗರಾಜ್, ವಿಶ್ವನಾಥ್, ಮಂಜುನಾಥ್ ಮುಂತಾದವರು. ಭಾಗವಹಿಸಿದ್ದರು.

ವಿಕ ಚಿತ್ರಲೋಕ





ದೊಡ್ಡಬಳ್ಳಾಪುರದ ಅರಳು ಮಲ್ಲಿಗೆ ಗ್ರಾ.ಪಂ. ವ್ಯಾಪ್ತಿಯ ಎಸ್.ಎಂ.ಗೊಲ್ಲಹಳ್ಳಿಯಲ್ಲಿ ಸ್ವಯಂಚಾಲಿತ ಹವಾಮಾನ ಕೇಂದ್ರದ ಉದ್ಘಾಟನೆ ಕಾರ್ಯಕ್ರಮದಲ್ಲಿ ಗ್ರಾಮಸ್ಥರು ಭಾಗವಹಿಸಿದ್ದರು (ಎಡಚಿತ್ರ). ಸ್ವಯಂಚಾಲಿತ ಹವಾಮಾನ ಕೇಂದ್ರ.